# ನಾವೊ ಎಂಬ ರೋಬಾಟ್

**ಮನುಷ್ಯರಂತೆಯೇ ಭಾವನೆಗಳನ್ನು ವ್ಯಕ್ತಪಡಿಸುವ ಈ ರೋಬಾಟ್ ವಿಜ್ಞಾನ ಜಗತ್ತಿನ ಹೊಸ ಅಚ್ಚರಿ!**



ನಾವೊ. ಇತ್ತೀಚೆಗಷ್ಟೇ ಹುಟ್ಟಿದ್ದು. ಆದರೂ ನೀವು ಬಯ್ದರೆ ಇದು ಅಳುತ್ತದೆ, ಮುದ್ದು ಮಾಡಿದರೆ ನಗುತ್ತದೆ, ಕೊನೆಗೆ ಕಿವಿ ಹಿಂಡಿದರೆ ಅಯ್ಯೋ ಎಂದು ಚೀರುತ್ತದೆ. ಆಗಲೇ ಒಂದು ವರ್ಷದ ಮಗುವಿನಂತೆ ವರ್ತಿಸುವ ನಾವೊ ಒಂದು ಅದ್ಭುತ ರೋಬಾಟ್. ಭಾವನೆಗಳನ್ನು ಹೊರಹೊಮ್ಮಿಸುವ, ಮುಖ, ಕೈಕಾಲುಗಳ ಚಲನೆಯ ಮೂಲಕ ಪ್ರತಿಕ್ರಿಯಿಸುವ, ಒಲವನ್ನು ವ್ಯಕ್ತಪಡಿಸುವ ಇದು ರೋಬ್ಯಾಟಿಕ್ ತಂತ್ರಜ್ಞಾನದಲ್ಲಿ ಹೊಸ ಮೈಲಿಗಲ್ಲು.

ಆದರೆ ಈ ಸಂಶೋಧನೆ ಪ್ರಕಟವಾಗಿದ್ದು ರೋಬಾಟ್ ತಂತ್ರಜ್ಞಾನದಲ್ಲಿ ಅಗಾಧ ಪ್ರಗತಿ ಸಾಧಿಸಿರುವ ಜಪಾನ್ ವಿಜ್ಞಾನಿಗಳಿಂದಲ್ಲ. ಇಂಗ್ಲೆಂಡ್‌ನ ಹರ್ಟ್‌ಫೋರ್ಡ್‌ಶೈರ್ ವಿಶ್ವವಿದ್ಯಾನಿಲಯ ಫ್ರಾನ್ಸ್, ಡೆನ್ಮಾರ್ಕ್ ಮೊದಲಾದ ಯೂರೋಪ್ ರಾಷ್ಟ್ರಗಳ ಜೊತೆ ಸೇರಿ ಈ ಮಹತ್ವದ ಸಾಧನೆಯಲ್ಲಿ ಯಶಸ್ಸು ಕಂಡಿದೆ.

ನಾವೊ ಒಂದು ವರ್ಷದ ಮಗುವಿನಂತೆ ವರ್ತಿಸುತ್ತಿದ್ದು ಭಯ, ಸಂತಸ, ದುಃಖ, ಸಿಟ್ಟು, ಹೆಮ್ಮೆ.. ಹೀಗೆ ಎಲ್ಲಾ ಥರದ ಭಾವನೆಗಳನ್ನು ವ್ಯಕ್ತಪಡಿಸುತ್ತದೆ. ಅದೂ ಅದರ ಜೊತೆ ಇರುವ ವ್ಯಕ್ತಿಗಳು ಹೇಗೆ ವರ್ತಿಸುತ್ತಾರೆ, ಅವರ ಭಾವನೆಗಳು ಹೇಗಿರುತ್ತವೆ ಎಂಬುದನ್ನು ಮಗುವಿನಂತೆ ಗಮನವಿಟ್ಟು ನೋಡಿ ಅದಕ್ಕೆ ಪ್ರತಿಕ್ರಿಯಿಸುವ ಅಗಾಧ ಬುದ್ಧಿಶಕ್ತಿಯನ್ನು ಇದರಲ್ಲಿ ತುಂಬಲಾಗಿದೆ. ತನ್ನೊಡನೆ ಹೆಚ್ಚು ವ್ಯವಹರಿಸುವ ವ್ಯಕ್ತಿಗಳೊಡನೆ ಅಂಟಿಕೊಳ್ಳುವ ನಾವೊ ವರ್ತನೆ ಅದ್ಭುತ. ಆತಂಕದಲ್ಲಿದ್ದಾಗ ತನ್ನ ನಿಗಾ ನೋಡಿಕೊಳ್ಳುವ ವ್ಯಕ್ತಿ ಸಮಾಧಾನ ಮಾಡದಿದ್ದರೆ ನಾವೊ ಖಿನ್ನತೆಯಿಂದ ವರ್ತಿಸುವುದೂ ಇದೆ. ಇದಕ್ಕೆಲ್ಲಾ ಸೆನ್ಸರ್, ಕ್ಯಾಮೆರಾ, ವಾಕ್‌ಗ್ರಹಣ ವ್ಯವಸ್ಥೆಯನ್ನು ಈ ರೋಬಾಟ್‌ನಲ್ಲಿ ಬಳಸಿಕೊಳ್ಳಲಾಗಿದೆ.

ಡಾ.ಲೋಲಾ ಕೆನಮೆರೊ ನೇತೃತ್ವದ ತಂಡ ರೂಪಿಸಿದ ಈ ರೋಬಾಟ್‌ನ ವೈಶಿಷ್ಟ್ಯವೆಂದರೆ ಮಾತಿಗಿಂತ ಹೆಚ್ಚಾಗಿ ಮನುಷ್ಯರ ಭಾವನೆಗಳನ್ನು, ದೇಹದ ಚಲನವಲನಗಳನ್ನು ಅರ್ಥ ಮಾಡಿಕೊಂಡು ವ್ಯವಹರಿಸುವುದು. ಆಸ್ಪತ್ರೆಯಲ್ಲಿ ಮಧುಮೇಹವಿರುವ ಮಕ್ಕಳಿಗೆ ಸ್ನೇಹಿತನಂತೆ ಒಡನಾಟ ಮಾಡುವುದು ಇಂಥ ರೋಬಾಟ್ ಅನ್ನು ಸೃಷ್ಟಿಸಿರುವ ಹಿಂದಿನ ಉದ್ದೇಶ. ಜೊತೆಗೆ ಮನೆಯಲ್ಲಿ ಒಂಟಿಯಾಗಿರುವ ವೃದ್ಧರಿಗೆ ಸಾಥ್ ನೀಡಲೂ ಇದನ್ನು ಬಳಸಿಕೊಳ್ಳುವ ಪ್ರಸ್ತಾವವಿದೆ.

–ಎಸ್ಸೆಚ್

---

# ನಕ್ಕುಬಿಡಿ..!

ಮಂಟಾ ಅಂಗಡಿಗೆ ಹೋಗಿ ಷಾಂಪೂ ಖರೀದಿಸಿದ. 'ಇದರ ಜೊತೆ ಏನು ಉಡುಗೊರೆ ಇದೆಯೋ ಅದನ್ನು ಕೊಡು?' ಅಂದ.

ಅಂಗಡಿಯಾತ: ಇದರ ಜೊತೆ ಯಾವ ಉಡುಗೊರೆಯೂ ಇಲ್ಲ!

ಮಂಟಾ: ಸುಳ್ಳು ಹೇಳಬೇಡ.. ಇದರ ಮೇಲೆಯೇ ಬರೆದಿದ್ದಾರೆ ನೋಡು– 'ಡ್ಯಾಂಡ್ರಫ್ ಫ್ರೀ' ಅಂತ..

★★★

ಟಿ.ವಿ ವರದಿಗಾರ– ಪೆಟ್ರೋಲ್ ಬೆಲೆ ಜಾಸ್ತಿ ಆಗಿದೆ, ಇದರ ಬಗ್ಗೆ ನಿಮ್ಮ ಅಭಿಪ್ರಾಯ ಏನ್ಸಾರ್?

ಮಂಟಾ: ನಂಗೇನೂ ಅನ್ನಿಸ್ತಾ ಇಲ್ಲ, ನಾನು ಆವಾಗ್ಲೂ 50 ರೂಪಾಯಿ ಪೆಟ್ರೋಲ್ ಹಾಕಿಸ್ತಿದ್ದೆ, ಈವಾಗ್ಲೂ ಅಷ್ಟೇ.

★★★

ಗುಂಡ, ಎಫ್‌ಎಂ ರೇಡಿಯೋಗೆ ಕರೆ ಮಾಡಿ, 'ಸಾರ್, ನನಗೆ ಒಂದು ಪರ್ಸ್ ಸಿಕ್ಕಿದೆ, ಅದರಲ್ಲಿ 2000 ರೂಪಾಯಿ ಇದೆ. ಅವರ ಅಡ್ರೆಸ್ಸೂ ಇದೆ' ಎಂದ.

ಎಫ್.ಎಂ ನಿರೂಪಕ: 'ಈಗ ಏನು ಮಾಡಬೇಕು ಅಂತೀರಾ?'

ಗುಂಡ: ಅವರಿಗಾಗಿ ಒಂದು ಶೋಕಗೀತೆ ಪ್ರಸಾರ ಮಾಡಿ ಮೇಡಂ..

–ಇಂದು



ಹುಡುಗನೊಬ್ಬ ಹುಡುಗಿಗೆ ಕಮಲ ಕೊಟ್ಟ. ಆಕೆ ಆತನ ಕೆನ್ನೆಗೆ ಬಾರಿಸಿದಳು.

ಹುಡುಗ: ನನ್ನನ್ನೇಕೆ ಹಾಗೆ ಹೊಡೆದೆ?

ಹುಡುಗಿ: ನೀನು ಬಿಜೆಪಿ ಗುರುತು ನೀಡಿದ್ದಕ್ಕೆ, ನಾನು ನಿನಗೆ ಕಾಂಗ್ರೆಸ್ ಗುರುತು ನೀಡಿದೆ!

★★★

ಮಂಟಾ ಹೆಣ್ಣು ನೋಡಲು ಹುಡುಗಿ ಮನೆಗೆ ಹೋದ. ಹುಡುಗಿಯ ಮನೆಯವರು 'ನೀನು ಹುಡುಗಿಯೊಂದಿಗೆ ಏನಾದರೂ ಕೇಳುವುದಿದ್ದರೆ ಕೇಳು' ಎಂದರು.

ಮಂಟಾ ನಾಚುತ್ತಾ: 'ಬೆಹನ್‌ಜೀ ನಿಮಗೆ ಎಷ್ಟು ಜನ ಸೋದರರಿದ್ದಾರೆ?' ಎಂದು ಕೇಳಿದ.

ಹುಡುಗಿ (ಕೋಪದಿಂದ): 'ಇಬ್ಬರಿದ್ದರು, ಈಗ ನೀನೂ ಸೇರಿ ಮೂವರಾಯ್ತು..' ಎಂದು ಎದ್ದು ಹೋದಳು!

★★★

ಮಗ: ಅಪ್ಪಾ! ಮದುವೆಯಾಗೋಕೆ ಎಷ್ಟು ಖರ್ಚಾಗುತ್ತೆ?

ಅಪ್ಪಾ: ಐಡಿಯಾ ಇಲ್ಲ ಮಗನೇ. ಯಾಕೇಂದ್ರೆ ನಾನಿನ್ನೂ ಖರ್ಚು ಮಾಡ್ತಾನೇ ಇದ್ದೇನೆ!

–ಸಿಂಧು